# ಬೆವರಿನ ಬೆಲೆ

ಹಾಕಿಗಾಳವ ಒಟ್ಟಿ
ಬೆವರಿಳಿಸಿ ಹೊರಬೇಕು
ಬಿರು ಬಿಸಿಲ ಬೇಗೆಯಲಿ
ಉಂಟಲ್ಲ ಹೊಟ್ಟೆ

ಕಡಲಿನಲಿ ಆನಂದ
ತುಂಬಿ ಈಜುತಲಿದ್ದ
ಮೀನುಗಳ ಪೇರಿಸುತ
ಗಂಟಲ್ಲಿ ಕಟ್ಟೆ

ಬದುಕು ನಡೆಯಲೆ ಬೇಕು
ಕೆದಕಿದರು ಪ್ರಕೃತಿಯು
ಮೋದವಿರದಿದ್ದರೂ
ಉಸಿರಿಗಾಗಿ

ಬರಿಪಾದ ಉರಿಯುತಿದೆ
ಬೆಂಕಿಯಂತೆಯೆ ಉಸುಕು
ಬಿಸಿಯಾದರೂ ಸಹಿಸಿ
ನಾಳೆಗಾಗಿ

**ಸುರೇಶ ನೆಗಳಗುಳಿ**



# ಬುತ್ತಿ

ಹೊರಗೆ ನೆತ್ತಿ ಸುಡುವ
ಉರಿ ಬಿಸಿಲ ಧಗೆ
ಕಾಲ ಕೆಳಗೆ ಬಿಸಿ ಮರಳು
ಮನದೊಳಗೂ ಕುದಿಯುವ
ದಿನ ನಿತ್ಯದ ಬದುಕ
ಬಂಡಿಯನೆಳೆವ
ಬೇಗೆಗೆ ಮನ ತಹತಹಿಸಿದರೂ
ಸಾಗಬೇಕಲ್ಲ ಇವೆಲ್ಲ
ಸಂಕಟಗಳ ಸರಮಾಲೆಗಳ
ಭಾರದ ಗಂಟಿನ
ಬಾಳ ಬುತ್ತಿಯ ಹೊರೆಯೊಡನೆ
ಹಸಿದ ಹೊಟ್ಟೆಯ ಚೀಲಕೆ
ತುತ್ತ ತುಂಬಿಸಲು ಎಷ್ಟೆಲ್ಲ
ಪರದಾಟ, ಒದ್ದಾಟ
ಹೋರಾಟಗಳ ಸಹಿಸುತ
ಉರಿವ ಚಿಂತೆಗಳ ಧಗೆಯು
ಶಮನವಾಗಿ ತಣ್ಣಗೆ ತಂಪಾಗಿ
ಇಂದಲ್ಲ ನಾಳೆಯಾದರೂ
ಒಳ್ಳೆಯ ದಿನಗಳು
ಬಂದೇ ಬರುವುದೆಂಬ
ಒಂದು ನಿರೀಕ್ಷೆಯ
ಆಶಯಗಳ ಹೊತ್ತು
ನೆಮ್ಮದಿಯ ನಾಳೆಯು
ಹಸಿರಾಗಿ ಹಸನಾಗುವ
ನಂಬಿಕೆಯನು ಉಳಿಸಿಕೊಂಡು
ಕೆಲವನು ಸಹಿಸಿಕೊಂಡು
ಬದುಕಲು ಪಡುವ
ಹರ ಸಾಹಸ
ಕೇವಲ ಇಷ್ಟೇ ಅಲ್ಲವೇ
ಈ ಬದುಕು?

**ಶಾಂತಲಾ ರಾಜಗೋಪಾಲ್**